# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:ಮಂಗಳೂರು ವಿಭಾಗ:ಮಂಗಳೂರು

ಸಂ:ಕರಾಸ:ಮಂವಿ:ಸಂ:ವಾ: 2289 :2021-22 ದಿನಾಂಕ:20.12.2021

## ಇ-ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ:03/2021-22
## (ಇ-ಪ್ರೊಕ್ಯೂರ್‌ಮೆಂಟ್/ಮಾನ್ಯುಯಲ್ ಸಂಧಾನ ಮೂಲಕ)

ಕ.ರಾ.ರ.ಸಾ.ನಿಗಮ, ಮಂಗಳೂರು ವಿಭಾಗದ ವ್ಯಾಪ್ತಿಗೆ ಬರುವ ಮಂಗಳೂರು ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಮಳಿಗೆಗಳಿಗೆ ಖಾಲಿಯಾಗಲಿರುವ/ಖಾಲಿ ಇರುವ ಮಳಿಗೆಗಳಿಗೆ <u>ಕಟ್ಟಿದ ಮಳಿಗೆ 05ವರ್ಷ ಅವಧಿಗೆ</u> (ಪ್ರತೀ ವರ್ಷ ಶೇ.10ರ ಪರವಾನಿಗೆ ಶುಲ್ಕದ ಹೆಚ್ಚಳದೊಂದಿಗೆ) ಪರವಾನಿಗೆದಾರರನ್ನು ಆಯ್ಕೆ ಮಾಡಿ ಪರವಾನಿಗೆ ನೀಡಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ-ಟೆಂಡರ್ ದಸ್ತಾವೇಜುಗಳನ್ನು ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ "https://eproc.karnataka.gov.in"ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ-ಟೆಂಡರ್‌ನಲ್ಲಿ ಭಾಗವಹಿಸುವವರು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಸೂಚಿಸಿರುವ ನಿಗದಿತ ದಾಖಲಾತಿಗಳೊಂದಿಗೆ ಆನ್‌ಲೈನ್ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕ: 18.01.2022ರಂದು ಸಮಯ 16.00 ಗಂಟೆಯವರೆಗೆ ಸಲ್ಲಿಸುವುದು. ಅರ್ಜಿದಾರರು ಮಳಿಗೆಗೆ ನಿಗದಿಪಡಿಸಿರುವ ಅರ್ಜಿ ಶುಲ್ಕ ಮತ್ತು ಅನ್ವಯಿಸುವ ಜಿಎಸ್‌ಟಿ ಮೊತ್ತದ ಡಿ.ಡಿ ಹಾಗೂ ಇ.ಎಂ.ಡಿ ಮೊತ್ತದ ಮೂಲ ಡಿ.ಡಿಗಳನ್ನು, ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿರುವ ಇತರ ಅಗತ್ಯ ದಾಖಲಾತಿಗಳೊಂದಿಗೆ ಮಂಗಳೂರು ವಿಭಾಗೀಯ ಕಛೇರಿಯ ಸಂಚಾರ ಶಾಖೆಯಲ್ಲಿ ಇಟ್ಟಿರುವ ಟೆಂಡರ್ ಪೆಟ್ಟಿಗೆಯಲ್ಲಿ ದಿನಾಂಕ:19.01.2022ರಿಂದ ದಿನಾಂಕ:20.01.2022ರವರೆಗೆ ಕಛೇರಿ ಸಮಯ ಬೆಳಗ್ಗೆ 10.00 ರಿಂದ 17.00ವರೆಗೆ ಸಲ್ಲಿಸುವುದು. ಇ-ಟೆಂಡರ್ ತೆರೆಯುವ ದಿನಾಂಕ:21.01.2022ರಂದು ಸಮಯ ಬೆಳಗ್ಗೆ 11.00 ಗಂಟೆಗೆ.(ಯಾವುದೇ ತಾಂತ್ರಿಕ ದೋಷವಿಲ್ಲದಿದ್ದಲ್ಲಿ).

ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:787/2017 ಮತ್ತು 794/09.08.2018 ಹಾಗೂ 809/2021ರಂತೆ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಒಳಪಡುವ ಮಳಿಗೆಯ ವಿವರ:

| ಕ್ರ.ಸಂ | ಬಸ್ ನಿಲ್ದಾಣ/ಘಟಕ ಹೆಸರು | ಮಳಿಗೆಯ ವಿವರ | ವಿಸ್ತೀರ್ಣ (ಚ.ಅ) | ಪರವಾನಿಗೆ ಅವಧಿ | ಕನಿಷ್ಠ ಮಾಸಿಕ ಪರವಾನಗಿ ಶುಲ್ಕ(ಜಿಎಸ್‌ಟಿ ಹಾಗೂ ಇನ್ನಿತರ ಶುಲ್ಕ ಒಳಗೊಂಡಿರುವುದಿಲ್ಲ) (ರೂ.ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿ.ಎಸ್.ಟಿ (ರೂ.ಗಳಲ್ಲಿ) | ಖಾಲಿ ಅಗುವ ದಿನಾಂಕ |
|---|---|---|---|---|---|---|---|---|---|
| 1 | ಮಂಗಳೂರು | ಜನರಲ್ ಸ್ಟಾಲ್ ಮಳಿಗೆ ಸಂಖ್ಯೆ:08 | 189.16 | 5ವರ್ಷ | 13190/- | 39070/- | 500/- | 156/- | 02.02.2022 |
| 2 | ಉಡುಪಿ ನಗರ ಬಸ್ಸುನಿಲ್ದಾಣ | ಜನರಲ್ ಸ್ಟಾಲ್ ಮಳೀಗೆ ಸಂಖ್ಯೆ:01 | 101.18 | 5ವರ್ಷ | 5650/- | 16450/- | 500/- | 118/- | ಖಾಲಿ ಇದೆ |
| 3 | ಉಡುಪಿ ನಗರ ಬಸ್ಸುನಿಲ್ದಾಣ | ಜನರಲ್ ಸ್ಟಾಲ್ ಮಳಿಗೆ ಸಂಖ್ಯೆ:02 (ವಿಕಲಚೇತನರಿಗೆ ಮೀಸಲು) | 62.11 | 5ವರ್ಷ | 7000/- | 20500/- | 500/- | 118/- | ಖಾಲಿ ಇದೆ |

ಮಂಗಳೂರು ವಿಭಾಗದ ವ್ಯಾಪ್ತಿಗೆ ಬರುವ ಮಂಗಳೂರು ಬಸ್ ನಿಲ್ದಾಣ ಮತ್ತು ಕುಂದಾಪುರ ಬಸ್ಸುನಿಲ್ದಾಣದಲ್ಲಿರುವ ಜನರಲ್ ಸ್ಟಾಲ್ ಮಳಿಗೆಗಳಿಗೆ ಖಾಲಿಯಾಗಲಿರುವ/ಖಾಲಿ ಇರುವ ಮಳಿಗೆಗಳಿಗೆ ಮತ್ತು ಮಂಗಳೂರು-3ನೇ ನರ್ಮ್ ಘಟಕದ ಉಪಹಾರಗೃಹ(ಸಸ್ಯಾಹಾರಿ/ಮಾಂಸಾಹಾರಿ) ಮಳಿಗೆಗೆ ಪರವಾನಿಗೆದಾರರನ್ನು ಆಯ್ಕೆ ಮಾಡಿ ಪರವಾನಿಗೆ ನೀಡಲು (ಪ್ರತೀ ವರ್ಷ ಶೇ.10ರ ಪರವಾನಿಗೆ ಶುಲ್ಕದ ಹೆಚ್ಚಳದೊಂದಿಗೆ) ಮಾನ್ಯುಯಲ್ ಸಂಧಾನ ಆಹ್ವಾನಿಸಲಾಗಿದೆ. ವಿವರಗಳು ಕೆಳಕಂಡಂತಿದೆ.

ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ : 787/2017 ಮತ್ತು 794/09.08.2018 ಹಾಗೂ 809/2021ರಂತೆ ರಂತೆ ಮಾನ್ಯುಯಲ್ ಸಂಧಾನಕ್ಕೆ ಒಳಪಡುವ ಮಳಿಗೆಯ ವಿವರ:

| ಕ್ರ.ಸಂ | ಬಸ್ ನಿಲ್ದಾಣ/ಘಟಕ ಹೆಸರು | ಮಳಿಗೆಯ ವಿವರ | ವಿಸ್ತೀರ್ಣ (ಚ.ಅ) | ಪರವಾನಿಗೆ ಅವಧಿ | ಕನಿಷ್ಠ ಮಾಸಿಕ ಪರವಾನಗಿ ಶುಲ್ಕ(ಜಿಎಸ್‌ಟಿ ಹಾಗೂ ಇನ್ನಿತರ ಶುಲ್ಕ ಒಳಗೊಂಡಿರುವುದಿಲ್ಲ) (ರೂ.ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ | ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿ.ಎಸ್.ಟಿ (ರೂ.ಗಳಲ್ಲಿ) | ಖಾಲಿ ಅಗುವ ದಿನಾಂಕ |
|---|---|---|---|---|---|---|---|---|
| 1 | ಮಂಗಳೂರು | ಜನರಲ್ ಸ್ಟಾಲ್ ಮಳಿಗೆ ಸಂಖ್ಯೆ:03 | 96.00 | 5ವರ್ಷ | 22385/- | 67155/- | 264/- | ಖಾಲಿ ಇದೆ |
| 2 | ಕುಂದಾಪುರ | ಜನರಲ್ ಸ್ಟಾಲ್ ಮಳಿಗೆ ಸಂಖ್ಯೆ:03 | 193.68 | 5ವರ್ಷ | 2784/- | 8352/- | 118/- | ಖಾಲಿ ಇದೆ |

Scanned by CamScanner

| | | | | | | | | |
|---|---|---|---|---|---|---|---|---|
| 3 | ಮಂಗಳೂರು -3ನೇ ನಿರ್ಮಾಣ ಘಟಕ | ಉಪಹಾರ ಗೃಹ (ಸಸ್ಯಾಹಾರಿ/ ಮಾಂಸಾಹಾರಿ) | 2705.00 | 5ವರ್ಷ+ (5ವರ್ಷ ನವೀಕರಣ) | 13200/- | 39600/- | 156/- | ಖಾಲಿ ಇದೆ |
| | ಕ್ರಮ ಸಂಖ್ಯೆ:03ರ ಉಪಹಾರಗೃಹ(ಸಸ್ಯಾಹಾರಿ/ಮಾಂಸಾಹಾರಿ) ಮಳಿಗೆಗೆ ಐದು ವರ್ಷದ ಅವಧಿಗೆ ಪರವಾನಿಗೆ ನೀಗದಿಪಡಿಸಲಾಗಿದ್ದು, ಸದರಿ ಉಪಹಾರಗೃಹದ ನವೀಕರಣಕ್ಕೆ ಸಂಬಂಧಿಸಿದಂತೆ ಸಂಧಾನ ಷರತ್ತು, ನಿಬಂಧನೆಗಳ ಖಂಡಿಕೆ(26)ರ ಕ್ರಮಸಂಖ್ಯೆ: 18ನ್ನು ಅವಲೋಕಿಸುವುದು. | | | | | | | |

| ಕ್ರ .ಸಂ | ವಿವರ | ದಿನಾಂಕ | ಸಮಯ |
|---|---|---|---|
| 1 | ಇ-ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | 18.01.2022 | 16:00 |
| 2 | ಅರ್ಜಿದಾರರು ಮಳಿಗೆಗೆ ನಿಗದಿಪಡಿಸಿರುವ ಅರ್ಜಿ ಶುಲ್ಕ ಅನ್ವಯಿಸುವ ಜಿಎಸ್‌ಟಿ ಹಾಗೂ ಇ.ಎಂ.ಡಿ ಮೊತ್ತದ ಮೂಲ ಡಿ.ಡಿಗಳನ್ನು ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿರುವ ಇತರ ಅಗತ್ಯ ದಾಖಲಾತಿಗಳೊಂದಿಗೆ ಮಂಗಳೂರು ವಿಭಾಗೀಯ ಕಛೇರಿಯ ಸಂಚಾರ ಶಾಖೆಯಲ್ಲಿ ಇಟ್ಟಿರುವ ಟೆಂಡರ್ ಪೆಟ್ಟಿಗೆಯಲ್ಲಿ ಸಲ್ಲಿಸುವ ದಿನಾಂಕ ಮತ್ತು ಸಮಯ (ಕಛೇರಿ ಸಮಯ ಬೆಳಗ್ಗೆ 10.00ರಿಂದ ಸಂಜೆ 17.00ವರೆಗೆ) | ದಿ:19.01.2022ರ ಸಮಯ 10:00 ರಿಂದ ದಿ:20.01.2022ರ ಸಮಯ 17:00ರವರೆಗೆ | |
| 3 | ವ್ಯಯಕ್ತಿಕ ಸಂಧಾನಕ್ಕೆ ನಿಗದಿಪಡಿಸಿರುವ ಮಳಿಗೆಗಳಿಗೆ ಸಂಧಾನದಲ್ಲಿ ಭಾಗವಹಿಸುವವರು ಸಂಧಾನ ಅರ್ಜಿ ಪಡೆಯಲು ನಿಗದಿಪಡಿಸಿರುವ ಕೊನೆಯ ದಿನಾಂಕ ಮತ್ತು ಸಮಯ (ಕಛೇರಿ ಸಮಯ ಬೆಳಗ್ಗೆ 10:00ರಿಂದ ಸಂಜೆ 17:00ರವರೆಗೆ) ಹಾಗೂ ಸಂಧಾನ ದಿನಾಂಕ | ದಿ:21.01.2022 ಸಮಯ 12:00ಗಂಟೆ | |
| 4 | ಇ-ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ) | 21.01.2022 | 11:00 |
| 5 | ಸಂಧಾನ ದಿನಾಂಕ ಮತ್ತು ಸಮಯ | 21.01.2022 | 12:00 |

ಸೂಚನೆ:

1) ಇ-ಟೆಂಡರ್ ಪ್ರಕಟಣೆಯಲ್ಲಿ ಮಳಿಗೆಗಳಿಗೆ ನಿಗದಿಪಡಿಸಿದ ಇ.ಎಂ.ಡಿ ಮೊತ್ತದಲ್ಲಿ ರೂ.500-00 ಗಳನ್ನು ಮಾತ್ರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿಸುವುದು ಉಳಿದ ಇ.ಎಂ.ಡಿ ಮೊತ್ತವನ್ನು ಡಿ.ಡಿ.ಮೂಲಕ ಪಡೆದು ಸದರಿ ಡಿ.ಡಿಯ ಹಿಂಭಾಗದಲ್ಲಿ ತಮ್ಮ ಹೆಸರು. ಬಿಡ್ ಮಾಡುವ ಮಳಿಗೆಯ ಹೆಸರು & ಮಳಿಗೆಯ ಸಂಖ್ಯೆಯನ್ನು ನಮೂದಿಸಿ. ಸದರಿ ಡಿ.ಡಿಯ ಜೆರಾಕ್ಸ್ ಪ್ರತಿಯನ್ನು ಸೂಚಿಸಿರುವ ಇತರೆ ದಾಖಲಾತಿಗಳೊಂದಿಗೆ ಅಪ್‌ಲೋಡ್ ಮಾಡುವುದು.

2) ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸುವ ಬಿಡ್‌ದಾರರು ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿರುವ, ಅಪ್‌ಲೋಡ್ ಮಾಡಿರುವ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು , ನಿಗದಿಪಡಿಸಿರುವ ಇ.ಎಂ.ಡಿ ಮತ್ತು ಅರ್ಜಿ ಶುಲ್ಕದ ಮೂಲ ಡಿ.ಡಿ ಯೊಂದಿಗೆ ದಿನಾಂಕ:19.01.2022 ರಿಂದ ದಿ:20.01.2022ರ ಕಛೇರಿ ಅವಧಿ ಸಮಯ ಬೆಳಗ್ಗೆ 10:00ರಿಂದ ಸಮಯ 17:00ರ ಗಂಟೆಯ ಒಳಗೆ ವಿಭಾಗೀಯ ಕಛೇರಿ ಸಂಚಾರ ಶಾಖೆಯಲ್ಲಿರುವ ಬಾಕ್ಸ್‌ನಲ್ಲಿ ಹಾಕುವುದು.

3) ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿರುವ ಮಳಿಗೆಗಳಿಗೆ ಕನಿಷ್ಟ ಮಾಸಿಕ ಪರವಾನಿಗೆ ಶುಲ್ಕವನ್ನು ನಿಗದಿಪಡಿಸಿದ್ದು, ಕನಿಷ್ಟ ಮಾಸಿಕ ಪರವಾನಿಗೆ ಶುಲ್ಕವು ಜಿಎಸ್‌ಟಿ ಹಾಗೂ ಅನ್ವಯಿಸುವ ಇತರ ಶುಲ್ಕವನ್ನು ಒಳಗೊಂಡಿರುವುದಿಲ್ಲ. ಬಿಡ್ದುದಾರರು ಇ-ಟೆಂಡರ್‌ನಲ್ಲಿ ನಮೂದಿಸುವ ಮೊತ್ತವನ್ನು ಕೇವಲ ಮಾಸಿಕ ಪರವಾನಿಗೆ ಶುಲ್ಕವೆಂದು ಮಾತ್ರ ಪರಿಗಣಿಸಲಾಗುವುದು. ಆಯ್ಕೆಗೊಂಡ H1 ಪರವಾನಿಗೆದಾರರು ತಾವು ಸೂಚಿಸಿದ ಮಾಸಿಕ ಪರವಾನಿಗೆ ಶುಲ್ಕದ ಮೇಲೆ ಜಿಎಸ್‌ಟಿ ಹಾಗೂ ಅನ್ವಯಿಸುವ ಇತರ ಶುಲ್ಕಗಳನ್ನು ಪ್ರತೀ ಮಾಹೆ ಸಂದಾಯಮಾಡತಕ್ಕದ್ದು.

4) ಟೆಂಡರ್ ಪ್ರಕಟಣೆಯಲ್ಲಿನ ಸಂಧಾನಕ್ಕೆ ನಿಗದಿಪಡಿಸಿರುವ ಕ್ರಮ ಸಂಖ್ಯೆ(3)ರ ಉಪಹಾರಗೃಹ(ಸಸ್ಯಾಹಾರಿ/ಮಾಂಸಾಹಾರಿ) ಮಳಿಗೆಯಲ್ಲಿ ವಿಶೇಷವಾಗಿ ನಿಗಮದ ಕರ್ತವ್ಯ ನಿರ್ವಹಿಸುವ ಉತ್ತರ ಕರ್ನಾಟಕದ ಚಾಲನಾ ಸಿಬ್ಬಂದಿಗಳ ಅನುಕೂಲಕ್ಕಾಗಿ ಉತ್ತರ ಕರ್ನಾಟಕ ಶೈಲಿಯ ಊಟ ಉಪಹಾರವನ್ನು ತಯಾರಿಸಿ. ನಿರ್ದಿಷ್ಟ ಗುಣಮಟ್ಟ ಮತ್ತು

Scanned by CamScanner

ನಿಗದಿತ/ರಿಯಾಯ್ತಿತಿ ದರದಲ್ಲಿ ಊಟ/ಉಪಹಾರವನ್ನು ಒದಗಿಸುವ ನಿಟ್ಟಿನಲ್ಲಿ ಸದರಿ ಉಪಹಾರಗೃಹ ಮಳಿಗೆಯಲ್ಲಿ ತಯಾರಿಸಿ ಒದಗಿಸಬೇಕಾದ ಆಹಾರ ಪದಾರ್ಥಗಳು ಮತ್ತು ಪ್ರಮಾಣದ ವಿವರಗಳನ್ನು ಅನುಬಂಧ-ಅ ರಲ್ಲಿ ನಿಗದಿಪಡಿಸಿದ್ದು ಅದರಂತೆ ಉಪಹಾರಗೃಹದಲ್ಲಿ ಕಡ್ಡಾಯವಾಗಿ ತಯಾರಿಸಿ ಸಿಬ್ಬಂದಿಗಳಿಗೆ ಒದಗಿಸುವ ಷರತ್ತು ನಿಬಂಧನೆಗೊಳಪಟ್ಟು ಪರವಾನಿಗೆ ನೀಡಲಾಗುವುದು. ಈ ಬಗ್ಗೆ ಷರತ್ತು ನಿಬಂಧನೆಗಳನ್ನು ಓದಿ ಅರ್ಥೈಸಿಕೊಂಡು ಒಪ್ಪಿರುವ ಬಗ್ಗೆ ಅನುಬಂಧ-ಅ ಎಲ್ಲಾ ಪುಟಗಳ ಷರತ್ತು ಮತ್ತು ನಿಬಂಧನೆಗಳ ಪ್ರತಿಯಲ್ಲಿ. ಟೆಂಡರ್‌ದಾರರು/ಅರ್ಜಿದಾರರು/ಬಿಡ್‌ದಾರರು ಸಹಿ ಮಾಡಿ, ಸದರಿ ದಾಖಲಾತಿಗಳನ್ನು ಸಂಧಾನ ಅರ್ಜಿಯೊಂದಿಗೆ ಲಗತ್ತಿಸಿ ನಿಗದಿತ ದಿನಾಂಕದಂದು ಸಂಧಾನದಲ್ಲಿ ಭಾಗವಹಿಸುವುದು.

5) ಟೆಂಡರ್ ಪ್ರಕಟಣೆಯಲ್ಲಿನ ಸಂಧಾನಕ್ಕೆ ನಿಗದಿಪಡಿಸಿರುವ ಕ್ರಮ ಸಂಖ್ಯೆ(3)ರ ಉಪಹಾರಗೃಹ(ಸಸ್ಯಾಹಾರಿ/ಮಾಂಸಾಹಾರಿ) ಮಳಿಗೆ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಸ್ಥಳಗಳಲ್ಲಿ ಘಟಕದ ಭದ್ರತಾ ವಿಷಯದಲ್ಲಿ ಯಾವುದೇ ರೀತಿಯ ಸಮಸ್ಯೆ ಆಗದ ರೀತಿಯಲ್ಲಿ ಸಾರ್ವಜನಿಕರು ಸಹ ಉಪಹಾರಗೃಹದ ಪ್ರಯೋಜನ ಪಡೆದುಕೊಳ್ಳಲು ಅನುಕೂಲ ಮಾಡಿಕೊಡಲಾಗಿದ್ದು ಅದರಂತೆ ಅಗತ್ಯ ಭದ್ರತಾ ವ್ಯವಸ್ಥೆಯನ್ನು ಮಾಡಿಕೊಳ್ಳುವುದು ಆಯ್ಕೆಯಾದ ಪರವಾನಿಗೆದಾರರ ಜವಾಬ್ದಾರಿಯಾಗಿರುತ್ತದೆ. ಹಾಗೂ ಮಾರುಕಟ್ಟೆ ದರಕ್ಕನುಗುಣವಾಗಿ ಊಟ/ಉಪಹಾರವನ್ನು ಸಾರ್ವಜನಿಕರಿಗೆ ಒದಗಿಸಬೇಕಾಗಿರುತ್ತದೆ.

6) ವಿಕಲಚೇತನರಿಗೆ ಮೀಸಲಿಟ್ಟ ಮಳಿಗೆಗಳನ್ನು, ಒಬ್ಬ ಬಿಡ್‌ದಾರರು ಒಂದು ಮಳಿಗೆಯನ್ನು ಮಾತ್ರ ಮೀಸಲಾತಿ ಆಧಾರದ ಮೇಲೆ ಪಡೆಯಲು ಅವಕಾಶವಿದೆ. ನಾಲ್ಕು ರಾಜ್ಯ ಸಾರಿಗೆ ನಿಗಮ/ಸಂಸ್ಥೆ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಮತ್ತು ಇತರೆ ಸರ್ಕಾರಿ ಇಲಾಖೆಗಳಲ್ಲಿ ಯಾವುದೇ ಮಳಿಗೆಗಳ ಪರವಾನಗಿಯನ್ನು ಮೀಸಲಾತಿ ಆಧಾರದ ಮೇಲೆ ಪಡೆದಿರುವುದಿಲ್ಲ ಎಂಬ ಬಗ್ಗೆ ಸ್ವಯಂ-ದೃಢೀಕರಣವನ್ನು ಬಿಡ್‌ದಾರರು ಇ-ಟೆಂಡರ್‌ನಲ್ಲಿ ಅಪ್‌ಲೋಡ್ ಮಾಡುವುದು. ಈ ನಿಯಮವನ್ನು ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್‌ದಾರರು ಉಲ್ಲಂಘಿಸಿರುವುದು ಯಾವುದೇ ಹಂತದಲ್ಲಿ ಕಂಡು ಬಂದಲ್ಲಿ, ಇ.ಎಂ.ಡಿ/ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಆಯ್ಕೆ/ಕರಾರನ್ನು ರದ್ದುಗೊಳಿಸಲಾಗುವುದು.

7) ಮೀಸಲಾತಿ ಅಡಿಯಲ್ಲಿ ನಿಗದಿಪಡಿಸಿರುವ ಮಳಿಗೆಗೆ ಭಾಗವಹಿಸುವ ಬಿಡ್‌ದಾರರು/ಅರ್ಜಿದಾರರು ಮೀಸಲಾತಿಗೆ ಸಂಬಂಧಿಸಿದ ದಾಖಲೆಗಳನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ಅಪ್‌ಲೋಡ್ ಮಾಡುವುದು.

8) ವೈಯಕ್ತಿಕ ಸಂಧಾನದಲ್ಲಿ ಭಾಗವಹಿಸುವಾಗ ಷರತ್ತು ನಿಬಂಧನೆಗಳನ್ನು ಒಪ್ಪಿಕೊಂಡು. ಇ.ಎಂ.ಡಿ ಹಣ ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಮಂಗಳೂರು ವಿಭಾಗ, ಮಂಗಳೂರು (Divisional Controller, KSRTC, Mangaluru Division, Mangaluru) ರವರ ಪದನಾಮಕ್ಕೆ ಪಡೆದ ಡಿ.ಡಿಯ ಮೂಲ ಪ್ರತಿ ಹಾಗೂ ಷರತ್ತು ನಿಬಂಧನೆಗಳಲ್ಲಿ ಸೂಚಿಸಿರುವ ಅಗತ್ಯ ದಾಖಲಾತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಿ ಭರ್ತಿ ಮಾಡಿದ ಅರ್ಜಿ ಫಾರಂ ಹಾಗೂ ದಾಖಲಾತಿಗಳ ಅಡಕದೊಂದಿಗೆ ದಿ:21.01.2022 ರಂದು ಸಮಯ 12:00ಗಂಟೆಗೆ ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು ಮತ್ತು ಟೆಂಡರ್ ಸಮಿತಿಯ ಸಮ್ಮುಖದಲ್ಲಿ ನಡೆಸಲಾಗುವ ಮಾನ್ಯುಯಲ್ ಸಂಧಾನದಲ್ಲಿ ಭಾಗವಹಿಸುವುದು.

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಮಂಗಳೂರು ವಿಭಾಗ, ಮಂಗಳೂರು-575004 ಇವರಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಲು ಕೋರಲಾಗಿದೆ ಹಾಗೂ ಸಂಪರ್ಕಿಸುವ ದೂರವಾಣಿ ಸಂಖ್ಯೆ:-ವಿಭಾಗೀಯ ಸಂಚಾರ ಅಧಿಕಾರಿ-7760990702 & ಸಹಾಯಕ ಸಂಚಾರ ವ್ಯವಸ್ಥಾಪಕರು -7760990711

ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ:ಮಂಗಳೂರು.

Scanned by CamScanner